**ಕರ್ನಾಟಕ ಸರ್ಕಾರ**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಕನ್ನಡ ಭಾಷಾ ಪರೀಕ್ಷೆ-2025ರ ವೇಳಾಪಟ್ಟಿ ಮತ್ತು ಬೆಲ್ ಸಮಯಗಳನ್ನು ಈ ಕೆಳಗೆ ನೀಡಲಾಗಿದೆ (ಯುಜಿಸಿಇಟಿ – 2025)**

**ವೇಳಾಪಟ್ಟಿ**

| ದಿನಾಂಕ | ದಿನ | ಪರೀಕ್ಷಾ ಸಮಯ |
|---|---|---|
| 15-04-2025 | ಮಂಗಳವಾರ | ಬೆಳಿಗ್ಗೆ 10.30 ರಿಂದ 11.30 ರ ವರೆಗೆ |

## ಪರೀಕ್ಷೆಯ ಬೆಲ್ ಸಮಯ ಮತ್ತು ವಿವರಗಳು

ಈ ಬೆಲ್ ಸಮಯವನ್ನು ಯಾವುದೇ ಬದಲಾವಣೆ ಮಾಡದೆ ಅಥವಾ ದೂರು ಬರದಂತೆ ನಿಖರವಾಗಿ ಅನುಸರಿಸಲು ಸೂಚಿಸಿದೆ.

| ಕ್ರ.ಸಂ | ಬೆಲ್ ಸಂಖ್ಯೆ | ಸಮಯ | ವಿವರಗಳು |
|---|---|---|---|
| 01 | ಮೊದಲನೇ ಬೆಲ್ | ಬೆ. 10.10 | • ಪ್ರವೇಶ ಪತ್ರವನ್ನು ಮತ್ತು ಗುರುತಿನ ಚೀಟಿಯನ್ನು ತೋರಿಸಿದ ಅಭ್ಯರ್ಥಿಗಳಿಗೆ ಪರೀಕ್ಷೆಯ ಕೊಠಡಿಯನ್ನು ಪ್ರವೇಶಿಸಿ ನಿಗದಿತ ಆಸನದಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.<br>• ಕೊಠಡಿ ಮೇಲ್ವಿಚಾರಕರು ಪ್ರವೇಶ ಪತ್ರದಲ್ಲಿರುವ ಭಾವಚಿತ್ರವನ್ನು ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಯೊಂದಿಗೆ ಮತ್ತು ಗುರುತಿನ ಚೀಟಿಯೊಂದಿಗೆ ಪರಿಶೀಲಿಸುತ್ತಾರೆ ಮತ್ತು ಪ್ರವೇಶ ಪತ್ರದಲ್ಲಿ ಸಹಿ ಮಾಡುತ್ತಾರೆ. |
| 02 | ಎರಡನೇ ಬೆಲ್ | ಬೆ. 10.20 | • **ಬೆ.10.20** ಕ್ಕೆ ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಯ ಲಕೋಟೆಗಳನ್ನು ಕೊಠಡಿ ಮೇಲ್ವಿಚಾರಕರುಗಳಿಗೆ ಅವರುಗಳ ಕೊಠಡಿಗೆ ತಂದು ಕೊಡುತ್ತಾರೆ.<br>• ಕೊಠಡಿ ಮೇಲ್ವಿಚಾರಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಯ ಯನ್ನು ಅಭ್ಯರ್ಥಿಗಳಿಗೆ ತೋರಿಸಿ ಈ ರೀತಿ ಜೋರಾಗಿ ಹೇಳಬೇಕು "ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಗಳನ್ನು ಸೀಲ್ ಮಾಡಿರುವ ಲಕೋಟೆಯಲ್ಲಿ ಇಡಲಾಗಿದೆ ಮತ್ತು ಲಕೋಟೆಯು ಒಡೆದಿರುವುದಿಲ್ಲ" ಎಂದು ತೋರಿಸುತ್ತಾರೆ.<br>**ವಿ.ಸೂ.:** ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಯ ಲಕೋಟೆಯನ್ನು ತೆರೆಯಲು (Question Paper cum Answer Sheet Booklet) ಕೊಠಡಿ ಮೇಲ್ವಿಚಾರಕರು ಮಾತ್ರ ಅಧಿಕಾರವನ್ನು ಹೊಂದಿರುತ್ತಾರೆ. ಕೊಠಡಿ ಮೇಲ್ವಿಚಾರಕರನ್ನು ಹೊರತುಪಡಿಸಿ ಬೇರೆ ಅಧಿಕಾರಿ / ಸಿಬ್ಬಂದಿ ವರ್ಗ/ ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು / ಅಧ್ಯಕ್ಷರು / ಕಾರ್ಯದರ್ಶಿ / ಆಡಳಿತಾಧಿಕಾರಿ ಮುಂತಾದವರುಗಳು ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆಯಲು ಅಧಿಕಾರವನ್ನು ಹೊಂದಿರುವುದಿಲ್ಲ.<br>• ಬೆ. 10.25ಕ್ಕೆ ಅಭ್ಯರ್ಥಿಗಳಿಗೆ (Question Paper cum Answer Sheet Booklet) ಪ್ರಶ್ನೆ ಪತ್ರಿಕೆ ಸಮೇತ ಉತ್ತರ ಪತ್ರಿಕೆಯನ್ನು ಹೊಂದಿರುವ ಲಕೋಟೆಯನ್ನು ಸೂಕ್ತ ರೀತಿಯಲ್ಲಿ ವಿತರಿಸುತ್ತಾರೆ. ಅಭ್ಯರ್ಥಿಗಳು ಅದರಲ್ಲಿ ಎಚ್ಚರದಿಂದ ಸಿಇಟಿ ಸಂಖ್ಯೆಯನ್ನು ಮತ್ತು ಜನನ ದಿನಾಂಕವನ್ನು ಬರೆಯಬೇಕು.<br>• ಅಭ್ಯರ್ಥಿಗಳು ಎಚ್ಚರದಿಂದ ವರ್ಷನ್ ಕೋಡ್ ಮತ್ತು ಪ್ರಶ್ನೆ ಪತ್ರಿಕೆಯ ಕ್ರಮ ಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ಬರೆಯಬೇಕು. ನಂತರ ಪ್ರಶ್ನೆ ಪತ್ರಿಕೆ ಸಮೇತ ಉತ್ತರ ಪತ್ರಿಕೆಯ ನಿಗದಿತ ಜಾಗದಲ್ಲಿ ಸಹಿಯನ್ನೂ ಮಾಡಬೇಕು.<br>• ಮೂರನೇ ಬೆಲ್ ಆಗುವವರೆಗೂ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಕಿರುಪುಸ್ತಕವನ್ನು ನೋಡಲು ಅಥವಾ ಪತ್ರಿಕೆಯಲ್ಲಿ ಉತ್ತರಿಸುವುದಕ್ಕೆ ಅವಕಾಶ ಕೊಡಲಾಗುವುದಿಲ್ಲ.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳ ಸಹಿಯನ್ನು ನಾಮಿನಲ್ ರೋಲ್ ನಲ್ಲಿ ಪಡೆದು ಮುದ್ರಿತವಾಗಿರುವ ಸಹಿಯನ್ನು ತಾಳೆ ಮಾಡುತ್ತಾರೆ. |
| 03 | ಮೂರನೇ ಬೆಲ್ | ಬೆ.10.30 | • ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಸಮೇತ ಇರುವ ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಅವಕಾಶ ಕೊಡಲಾಗುವುದು.<br>• ಈ ಬೆಲ್ ಅಂದರೆ ಬೆ.10.30 ಆದ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಅಥವಾ ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅವಕಾಶವಿರುವುದಿಲ್ಲ. |
| 04 | ನಾಲ್ಕನೇ ಬೆಲ್ | ಬೆ.11.00 | • ಇದು ಮೊದಲನೆಯ ಎಚ್ಚರಿಕೆಯ ಬೆಲ್, ಕೊಠಡಿ ಮೇಲ್ವಿಚಾರಕರು **ಅಭ್ಯರ್ಥಿಗಳಿಗೆ, ಪರೀಕ್ಷೆಯ ಅರ್ಧಗಂಟೆಯ ಅವಧಿಯು ಮುಗಿದಿದೆ ಎಂದು ತಿಳಿಸುತ್ತಾರೆ.** |
| 05 | ಐದನೇ ಬೆಲ್ | ಬೆ.11.25 | • ಇದು ಎರಡನೆಯ ಹಾಗು ಕೊನೆಯ ಎಚ್ಚರಿಕೆಯ ಬೆಲ್, ಕೊಠಡಿ ಮೇಲ್ವಿಚಾರಕರು **ಅಭ್ಯರ್ಥಿಗಳಿಗೆ ಪರೀಕ್ಷೆ ಮುಗಿಯಲು ಕೇವಲ ಐದು ನಿಮಿಷಗಳು ಬಾಕಿ ಉಳಿದಿವೆ ಎಂದು ತಿಳಿಸುತ್ತಾರೆ.** |
| 06 | ಆರನೆಯ ಹಾಗೂ ಕೊನೆಯ ಬೆಲ್ | ಬೆ.11.30 | • ಪರೀಕ್ಷೆ ಮುಕ್ತಾಯ.<br>• ಈ ಬೆಲ್ ಆದ ತಕ್ಷಣ ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಸಮೇತ ಇರುವ ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದನ್ನು ನಿಲ್ಲಿಸಿದ್ದಾರೆ ಎಂದು ಖಾತ್ರಿಮಾಡಿಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಂದ ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಯನ್ನು ಪಡೆಯುವುದು.<br>• ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗುವುದಕ್ಕೆ ಮೊದಲು ಪ್ರಶ್ನೆ ಪತ್ರಿಕಾ ಸಮೇತ ಇರುವ ಉತ್ತರ ಪತ್ರಿಕೆಯನ್ನು ಅಭ್ಯರ್ಥಿಗಳಿಂದ ಪಡೆಯಲಾಗಿದೆಯೇ ಎಂದು ಖಾತ್ರಿ ಮಾಡಿಕೊಳ್ಳಬೇಕು. |

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು